೮. ೩೧-೪-೧೯೮೮ರ ಒಳಗೆ ಅಸಲನ್ನು ಪಾವತಿ ಮಾಡುವ ರೈತರಿಗೆ ಬಡ್ಡಿ ರಿಯಾಯಿತಿ ಕೊಡುವ ನಿರ್ದೇಶನ ಅಸ್ಪಷ್ಟವಾಗಿರುವುದರ ಬಗ್ಗೆ

ಶ್ರೀಮತಿ ಸುಮಾ ಪಸಂತ.—ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಚಾಲ್ತಿ, ಸುಸ್ತಿಬಾಕಿ ಅಸಲನ್ನು ೩೧-೪-೮೮ರೊಳಗೆ ಪಾವತಿ ಮಾಡಿದ ರೈತರಿಗೆ ಹಾಗೂ ಚಾಲ್ತಿ ವರ್ಷದ ಸಾಲವನ್ನು ಸಮಯಕ್ಕೆ ಸರಿಯಾಗಿ ಪಾವತಿ ಮಾಡಿದವರಿಗೆ ಬಡ್ಡಿ ರಿಯಾಯಿತಿಯನ್ನು ಸರ್ಕಾರ ಘೋಷಿಸಿದೆ. ಆದರೆ ಯಾವರು ಕೊಟ್ಟರೂ ದೇವರ ಪೂಜೆ ಮಾಡದವರು ಬಿಡುವುದಿಲ್ಲವೆಂಬಂತೆ ಸಾಲ ವಸೂಲಿ ಮಾಡುವವರು ಅನಂಷ್ಟಾನದ ಹೆಂತದಲ್ಲಿ ರೈತರಿಗೆ ನ್ಯಾಯವಾಗಿ ಸಿಗಬೇಕಾದ ಬಡ್ಡಿ ರಿಯಾಯಿತಿ ನೀಡಿದೆ. ಹೆಜ್ಜೆ ಹೆಜ್ಜೆಗೆ ನಿರ್ದೇಶನ ಸ್ಪಷ್ಟವಾಗಿಲ್ಲ ಎಂಬ ಕಾಂಟು ನೆಪ ನೀಡಿ ತೊಂದರೆ ಕೊಡುತ್ತಿರುವುದು ತಿಳಿದುಬಂದಿದೆ.

ಉದಾಹರಣೆಗೆ :—೧) ಒಂದು ಸಂಸ್ಥೆಯಿಂದ ಒಬ್ಬ ಸಾಲಗಾರ ೨-೩ ಸಾಲ ಪಡೆದಿದ್ದರೆ, ಎಲ್ಲಾ ಸಾಲ ಗಳನ್ನು ಮರುಪಾವತಿ ಮಾಡಿದರೆ ಮಾತ್ರ ಬಡ್ಡಿ ರಿಯಾಯಿತಿ ನೀಡಲಾಗುವುದು. ಇಲ್ಲಿ ಸಾಲ ಘಟಕ ಹೊರತು ವ್ಯಕ್ತಿ ಘಟಕ ಅಲ್ಲ.

೨) ಅಲ್ಲದೆ ಕಾಫಿ ಇತ್ಯಾದಿಕ್ಕೆ ಕಲ್ಟಿವೇಶನ್ ಸಾಲವು ರೈತರಿಗೆ ೪ ಕಂತುಗಳಲ್ಲಿ ಪಾವತಿ ಯಾಗುವುದು. ೫, ೬ ಮತ್ತು ೭ನೇ ವರ್ಷಗಳಲ್ಲಿ ಬೆಳೆಗಾರರು ಬಡ್ಡಿ ನೀಡಬೇಕು. ಬಡ್ಡಿ ಆಕರ ಮಾಡಿಲ್ಲ ಎಂಬ ಕಾರಣದಿಂದ ಮೊದಲಿನ ವರ್ಷಗಳಿಗೂ ಶೇಕಡ ೧೨ ಬಡ್ಡಿ ಹೊರಿಸಬಹುದು ಸರಿಯಲ್ಲ. ಇದೇ ರೀತಿ ತೆಂಗಿನ ಯೋಜನೆಯಲ್ಲೂ ಆಗಿದೆ. ಬಡ್ಡಿ ಪಾಕದ ವರ್ಷಗಳಿಗೂ ಬಡ್ಡಿ ರಿಯಾಯಿತಿ ನೀಡಬೇಕು ಬಡ್ಡಿ ರಿಯಾಯಿತಿಯ ಉದ್ದೇಶದ ಸಂಪೂರ್ಣ ಅರ್ಥ ಮಾಡಿಕೊಂಡರೆ ಈ ಕೇಳಿಕೆ ನ್ಯಾಯವಾದುದು.

೩) ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನವರು ಸಂಬಂಧಿಸಿದ ಕೆಲವು ಸರ್ಕಾರಿ ಅಧಿಕಾರಿ ಗಳಿಂದ ಈ ಕರ್ತವ್ಯ ಲೋಪ ನಡೆದಿದೆ ಎಂದು ಯಾರಿಗಾದರೂ ಮನವರಿಕೆ ಯಾಗಿದರೆ, ಪ್ರಸಕ್ತ ನಿಯಮದಿಂದ ಉಂಟಾದ ಮಲತಾಯಿ ಧೋರಣೆಯನ್ನು ಹೋಗಲಾಡಿಸುವುದು ಘನ ಸರ್ಕಾರದ ಆದ್ಯ ಕರ್ತವ್ಯವಾಗಿದೆ.

೪) ೧೯೮೨-೮೩ರಿಂದ ಕಾಫಿ ವ್ಯವಸಾಯಕ್ಕೂ ಬರ ತಟ್ಟಿದೆ, ಸಣ್ಣ ಬೆಳೆಗಾರರೆ ಅಪರಿಮಿತ ಸಾಲದ ಹೊರೆಯಿಂದ ತೊಳಲಾಡುತ್ತಿದ್ದಾರೆ. ೧೯೮೪ರಿಂದ ಈಚೆಗೆ ನೆಟ್ಟ ಕೆಲವು ತೋಟಗಳು ನಾಶವಾಗಿವೆ. ಪ್ರಕೃತಿಯ ಹಾಗೂ ವೇತನದ ಕಷ್ಟಕ್ಕೆ ರೈತರು ಸಿಕ್ಕಿ ಕಂಗಾಲಾಗಿದ್ದಾರೆ. ತಾವು ಕೂಡಲೇ ಬಡ್ಡಿ ಮನ್ನಾದ ಆಜ್ಞೆಯನ್ನು ಈ ಮೇಲೆ ಕೇಳಿಕೊಂಡಂತೆ ಕಾಫಿ ಸಾಲಗಾರರಿಗೂ ಏಲಕ್ಕಿ ಮತ್ತು ಇತರ ಬೆಳೆಗಳ ಮೇಲೆ ಹೊಂದಿಕೊಂಡು ಸಾಲಗಳನ್ನು ಅನ್ವಯವಾಗುವಂತೆ ಆದೇಶಿಸಬೇಕಾಗಿ ಪ್ರಾರ್ಥನೆ.

೫) ಬಡ್ಡಿ ರಿಯಾಯಿತಿಯಿಂದಾಗಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಡಿಸಿಸಿ. ಬ್ಯಾಂಕುಗಳಿಗೆ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ ಸರ್ಕಾರದಿಂದ ಬರಬೇಕಾದ ಹಣ ಸಂದಾಯವಾಗಲು ಒಂದೆರಡು ವರ್ಷಗಳಾಗುತ್ತವೆ. ಇದರಿಂದಾಗಿ ಈ ಸಂಸ್ಥೆಗಳು ಆರ್ಥಿಕ ಸಮಸ್ಯೆಕ್ಕೀಡಾಗುತ್ತವೆ ಅದರಲ್ಲೂ ಪ್ರಾಥಮಿಕ ಸಂಘಗಳ ಬವಣೆ ಹೇಳತೀರದು. ಒರಿಯ ಪುಸ್ತಕ ಹೊಂದಾಣಿಕೆಯಿಂದ ಆರ್ಥಿಕ ವ್ಯವಸ್ಥೆ ದೃಢವಾಗುವುದಿಲ್ಲ. ಆದ್ದರಿಂದ ರೈತರ ಸಾಲ ವಸೂಲಾದ ೩ ತಿಂಗಳೊಳಗೆ ಸರ್ಕಾರ ತಾನು ನೀಡಬೇಕಾದ ಹಣವನ್ನು ಪಾವತಿ ಮಾಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ —ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಬಡ್ಡಿ ರಿಯಾಯಿತಿ ಬಾಬ್ತು ಸರ್ಕಾರದ ಆದೇಶ ಈಗಾಗಲೇ ಹೊರಟಿದೆ. ಅದು ೩೧-೪-೮೮ರವರೆಗೆ ಅನ್ವಯವಾಗುತ್ತವೆ. ಮೊದಲನೆಯದಾಗಿ ಒಬ್ಬ ವ್ಯಕ್ತಿ ಒಂದು ಸಹಕಾರ ಸಂಘದಿಂದ ಒಂದಕ್ಕಿಂತ

ಹೆಚ್ಚು ಸಾಲವನ್ನು ಪಡೆದಿದ್ದರೆ ಆ ಎಲ್ಲಾ ಸಾಲಗಳನ್ನು ಪಾವತಿ ಮಾಡಿದರೆ ಮಾತ್ರ ಬಡ್ಡಿ ರಿಯಾಯಿತಿ ಪಡೆಯುವುದಕ್ಕೆ ಅರ್ಹನಾಗಿರುತ್ತಾನೆ. ಇದು ಸರ್ಕಾರದ ಆದೇಶ.

ಮತ್ತೊಂದು ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಕಾಫಿ, ತೆಂಗು ಮುಂತಾದ ಬೆಳೆಗಳಿಗೆ ಕೇವಲ ಬಡ್ಡಿ ಮಾತ್ರ ಕೆಲವು ಕಾಲದಲ್ಲಿ ಕೊಡಬೇಕಾಗುತ್ತದೆ, ಅಂಥ ಸಂದರ್ಭದಲ್ಲಿ ವಿನಾಯಿತಿ ಕೊಡಬೇಕೆಂದು ಹೇಳಿದ್ದಾರೆ. ಸರ್ಕಾರಿ ಆದೇಶದ ಪ್ರಕಾರ ಕಟ್ಟಬೇಕಾದ ಸಾಲದ ಕಂತುಗಳಲ್ಲಿ ಅಸಲನ್ನು ಪಾವತಿ ಮಾಡಿದರೆ ಮಾತ್ರ ಬಡ್ಡಿಯನ್ನು ವನ್ನಾ ಮಾಡುವಂಥದ್ದಿದೆ. ಸಹಕಾರ ಸಂಸ್ಥೆಗಳಿಗೆ ಬಡ್ಡಿ ರಿಯಾಯಿತಿಯನ್ನು ಆದಷ್ಟು ಜಾಗ್ರತೆ ಕೊಡಬೇಕೆಂಬ ಮಾತನ್ನು ಅವರು ಹೇಳಿದ್ದಾರೆ. ಸದರಿ ಬಡ್ಡಿ ರಿಯಾಯಿತಿಯನ್ನು ಸಹಕಾರಿ ಸಂಸ್ಥೆಗಳಿಗೆ ಆದಷ್ಟು ಜಾಗ್ರತೆ ಕೊಡುವ ಪ್ರಯತ್ನ ಮಾಡುತ್ತೇವೆ.

೯) ರಾಜ್ಯದಲ್ಲಿ ಖಾಲಿ ಇರುವ ೨೬೮ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಕರ್ನಾಟಕ ರಾಜ್ಯದ ಸರಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ೨೬೮ ಉಪನ್ಯಾಸಕರ ಹುದ್ದೆ ಖಾಲಿ ಇದ್ದು ಅದರಲ್ಲಿಯೂ ಮುಖ್ಯವಾಗಿ ದಕ್ಷಿಣಕನ್ನಡ, ಗುಲ್ಬರ್ಗ, ಹಾಸನ ಜಿಲ್ಲೆಗಳು ಉಪೇಕ್ಷೆಗೊಳಪಟ್ಟಿವೆ. ಕ್ರಮವಾಗಿ ಈ ಜಿಲ್ಲೆಗಳಲ್ಲಿ ೪೨, ೪೨, ೩೫ ಹುದ್ದೆಗಳು ಖಾಲಿ ಇವೆ. ಈ ತಾರತಮ್ಯ ನೀಗಬೇಕು. ಎಲ್ಲಾ ಹುದ್ದೆಗಳನ್ನು ತುಂಬಿಸಲು ಸರ್ಕಾರ ಅತಿ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕು. ರಾಜ್ಯ ಮಟ್ಟದ ನೇಮಕಾತಿ ಸಮಿತಿಯಿಂದ ಆಯ್ಕೆಯಾದ ಅಭ್ಯರ್ಥಿಗಳನ್ನು ವಿಳಂಬವಿಲ್ಲದೆ ನೇಮಿಸಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ ಆಳ್ವ.— ಮಾನ್ಯ ಅಧ್ಯಕ್ಷರೆ, ರಾಜ್ಯ ನೇಮಕಾತಿ ಸಮಿತಿಯ ಮೂಲಕ ಪದವಿ ಪೂರ್ವ ಕಾಲೇಜುಗಳಿಗೆ ಉಪನ್ಯಾಸಕರನ್ನು ನೇಮಿಸುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಆದಷ್ಟು ಬೇಗನೆ ಮಾಡುತ್ತೇವೆ.

೧೦) ಕೊಡಗು ಜಿಲ್ಲೆಯ ತಿತಿಮತಿ ವಲಯದಲ್ಲಿ ಆನೆಗೆ ವಿಷ ಪ್ರಾಶನ ಮಾಡಿರುವುದರ ಬಗ್ಗೆ ತನಿಖೆಗೆ ಒತ್ತಾಯ.

ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಕೊಡಗು ಜಿಲ್ಲೆಯ ತಿತಿಮತಿ ವಲಯದಲ್ಲಿನ ಕಟ್ಟೆಪುರದಿಂದ ಹಿಡಿದು ತಂದುಮಜ್ಜಿಗೆ ಹಳ್ಳದಲ್ಲಿ ಪಳಗಿಸಲಾಗಿದ್ದ ೩ ಕಾಡಾನೆಗಳ ಪೈಕಿ ಒಂದು ಆನೆ ಮೇ ೧೨ರಂದು ಸಾವಿಗೀಡಾಗಿದ್ದು, ಇದು ವಿಷ ಪ್ರಾಶನದಿಂದ ಸತ್ತಿರಬಹುದೆಂದು ಕೊಡಗಿನ ಜನರಲ್ಲಿ ಸಂಶಯ ಮೂಡಿದೆ. ಈ ಆನೆಯ ಮಾವುತ ಒಂದು ವಾರದ ಹಿಂದೆ ಲಾರಿಗೆ ಸಿಕ್ಕಿ ದುರ್ಮರಣಕ್ಕೀಡಾದ ದಾದರಿಂದ ಈ ಆನೆ ತನ್ನ ಮಾವುತನ ಹೊರತು ಬೇರೆ ಯಾರಿಗೂ ಬಗ್ಗುತ್ತಿರಲಿಲ್ಲವೆಂದೂ ಹಾಗೂ ನೋಡಿಕೊಳ್ಳಲು ಕಷ್ಟ ಆಗುಹುದೆಂದು ಬಾವಿಸಿ ವಿಷ ನೀಡಿರುವುದಾಗಿ ಸಂಶಯಿಸಲಾಗಿದೆ. ಆದರೆ ಆನೆಯ ದಂತದ ಸಲುವಾಗಿ ವಿಷ ಪ್ರಾಶನ ಮಾಡುತ್ತಿರುವುದಾಗಿ ಇತ್ತೀಚೆಗೆ ತಿಳಿದು ಬಂದಿದ್ದು ಈ ಆನೆಯನ್ನೂ ಕೂಡ ಅದಕ್ಕಾಗಿಯೇ ಕೊಂದಿರುವುದಾಗಿ ಸಂಶಯ ಪಡೆಲಾಗಿದೆ. ಮೈಸೂರಿನಲ್ಲಿ ಅರಣ್ಯ ಇಲಾಖೆಯ ನೌಕರರ ಕ್ಷೇಮಾಭಿವೃದ್ಧಿ ನಿಧಿಸಂಗ್ರಹಕ್ಕಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ಉದ್ಘಾಟಿಸಿ ಮಾತನಾಡುತ್ತಾ ಆರೋಗ್ಯ ಸಚಿವರಾದ ಶ್ರೀ ಬಿ. ರಾಚಯ್ಯನವರು ಆನೆ ಹಂತಕರ ಹಾವಳಿಯಿಂದ ಗುಡು ಆನೆಗಳ ಸಂಖ್ಯೆ ಇಳಿಮುಖವಾಗುತ್ತಿದೆಯೆಂದು ಹೇಳಿರುವುದನ್ನು ಇಲ್ಲಿ ಉದಾಹರಿಸಬಹುದಾಗಿದೆ. ಆದ್ದರಿಂದ ಆನೆಗಳ ವಿಷ ಪ್ರಾಶನದ ಹಿನ್ನೆಲೆಯಲ್ಲಿ ಯಾರು ಯಾರು ಇದ್ದಾರೆಂಬ ಬಗ್ಗೆ ಕೂಲಂಕಷ ತನಿಖೆ ನಡೆಸುವುದಲ್ಲದೆ ಇದರ ಹಿನ್ನೆಲೆಯಲ್ಲಿ ಇರುವವರನ್ನು ಪತ್ತೆ ಹಚ್ಚಿ ಇನ್ನು ಮುಂದೆ ಈ ರೀತಿ ಆಗದಂತೆ ಕ್ರಮ ಕೈಗೊಂಡು ತಪ್ಪಿತಸ್ಥರಿಗೆ ಉಗ್ರ ಶಿಕ್ಷೆಯನ್ನು ವಿಧಿಸಬೇಕೆಂದು ಅರಣ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯರಾಜ್ಯ ಮಂತ್ರಿ).—ಕೊಡಗು ಜಿಲ್ಲೆಯ ತಿತಿಮತಿ ವಲಯದಲ್ಲಿ, ಕಟ್ಟೆಪುರದಿಂದ ಹಿಡಿದು ಪಳಗಿಸಲಾಗಿದ್ದ ರಾಜೇಂದ್ರ ಎನ್ನುವ ಹೆಸರಿನ ಆನೆಯು ದಿನಾಂಕ ೧೧-೫-೧೯೮೮ರಂದು ರಾತ್ರಿ ಪಸರು ನೀಗಿರುವುದು ನಿಜವಾಗಿರುತ್ತದೆ.